# ಹರಿಯೆ ಸರ್ವೋತ್ತಮ ಹರಿಯೆ ಪರದೇವತೆ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
2. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** Lyrics mentioned without highlights are as per Ref. 1. The wordings given in yellow highlights are as per Ref. 2. The wordings given in green highlights are as per Ref. 3. All these wordings are slightly different and hence, they are given separately.
5. **Note:** The Ankita is different in these books. We have considered Ref.2 as standard and taken that Ankita for listing.
6. **Note:** Singer has mostly followed lyrics as in Ref. 1 except the last stanza, which is marked in grey highlights.

ರಾಗ ಸಾವೇರಿ ಝಂಪೆ ತಾಳ

| | |
|---|---|
| ಹರಿಯೇ ಸರ್ವೋತ್ತಮ ಹರಿಯೆ ಪರದೇವತೆ | ಹರಿಯೆ ಸರ್ವೋತ್ತಮ ಹರಿಯೆ ಪರ ದೈವತ |
| ಹರಿ ಸರ್ವ ವಿಶ್ವಮಯಂ ಜಗತು ॥ ಪ ॥ | ಹರಿಯೆ ಸರ್ವಂ ವಿಷ್ಣುಮಯಂ ಜಗತು |
| | |
| ಹರಿಯಲ್ಲದನ್ಯತ್ರ ದೈವಂಗಳಿಲ್ಲವೆಂದು | ಹರಿಯಲ್ಲದನ್ಯತ್ರ ದೈವಂಗಳಿಲ್ಲೆಂದು |
| ಉರಗನ ಹೆಡೆಯನ್ನು ಪಿಡಿದು ಹೇಳುವೆನಯ್ಯ ॥ ಅಪ ॥ | ಉರಗನ ಮುಡಿಯನಾರಾದರೆತ್ತಲಿ |
| | |
| ಜಗಂಗಳ ಪುಟ್ಟಿಸುವ ಬ್ರಹ್ಮ ನಿನ್ನ ಮಗ | ಜಗಂಗಳ ಪುಟ್ಟಿಸುವ ಬೊಮ್ಮ ನಿನ್ನ ಮಗ |
| ಜಗವ ಸಂಹರಿಸುವ ರುದ್ರ ಮೊಮ್ಮಗನು | ಜಗದ ಸಂಹಾರಕ ನಿನ್ನ ಮೊಮ್ಮಗನು |
| ಜಗದ ಪಾವನೆ ಭಾಗೀರಥಿ ನಿನ್ನ ಮಗಳಯ್ಯ | ಜಗದ ಪಾವನೆ ಭಾಗೀರಥಿ ನಿನ್ನ ಮಗಳು |
| ಜಗದ ಜೀವದ ಮಾತೆ ನಿನ್ನರಸಿಯೊ ದೇವ ॥ 1 ॥ | ಜಗದ ಜೀವನ ಮಾತೆ ನಿನ್ನರಸಿಯಲೆ ದೇವ |
| | |
| ವಿಶ್ವತೋಮುಖ ನೀನೇ ವಿಶ್ವತಶ್ಚಕ್ಷು ನೀನೇ | ವಿಶ್ವತೋಮುಖ ನೀನೆ ವಿಶ್ವತಶ್ಚಕ್ಷು ನೀನೆ |
| ವಿಶ್ವತೋಬಾಹು ವಿಶ್ವಪಾದನು ನೀನೆ | ವಿಶ್ವತೋಬಾಹು ವಿಶ್ವ ಉದರ ನೀನೆ |
| ವಿಶ್ವವುದರ ನೀನೇ ವಿಶ್ವವ್ಯಾಪಕ ನೀನೆ | ವಿಶ್ವವ್ಯಾಪಕ ವಿಶ್ವ ಸೂತ್ರಧಾರಕ ನೀನೆ |
| ವಿಶ್ವನಾಟಕ ಸೂತ್ರಧಾರಿಯೆ ವಿಷ್ಣುವೆ ॥ 2 ॥ | ವಿಶ್ವನಾಟಕ ವಿಶ್ವ ವಿಷ್ಣುವೇ ನಮೋ ನಮೋ |

ಆಗಮ ನಿಗಮ ಪುರಾಣ ಶಾಸ್ತ್ರಂಗಳಲ್ಲಿ
ಯೋಗಿಗಳರಸಿ ನಿಮ್ಮ ಕಾಣದಿಪ್ಪರೊ
ನಾಗಶಯನ ಭೋಗಿ ಭೂಷಣ ವಂದಿತ
ಭಾಗವತ ಪ್ರಿಯ ಶ್ರೀ ಪುರಂದರ ವಿಠಲ ॥ 3 ॥

ಆಗಮ ನಿಗಮ ಪೌರಾಣ ಶಾಸ್ತ್ರಂಗಳಿಗೆ
ಯೋಗಿ ಜನಕಗಮ್ಯ ಮೂರ್ತಿ ನೀನೆ
ನಾಗಶಯನ ಸಿರಿ ಭೋಗಿ ಭೂಷಣ ವಿನುತ
ಭಾಗವತರ ಪ್ರಿಯ ಪುರಂದರ ವಿಠಲ

(ಆಗಮ ನಿಗಮ ಪುರಾಣಗಳೆಲ್ಲವು
ಯೋಗಿ ಜನ ಪೊಗಳುತ್ತಿರೆ
ನಾಗಶಯನ ಭೋಗಿ ಭೂಷಣ ವಂದಿತ
ಭಾಗವತರ ಪ್ರಿಯ ಪುರಂದರ ವಿಠಲ ॥ 3 ॥ )

**Note:** The wordings given below in green highlights are as per Ref. 3.

ರಾಗ ಸಾವೇರಿ ಝಂಪೆ ತಾಳ

ಹರಿಯೇ ಸರ್ವೋತ್ತಮ ಹರಿಯೆ ಪರದೇವತೆ ॥ ಪ ॥

ಹರಿಯಲ್ಲದನ್ಯತ್ರ ದೈವಳುಂಟೆಂದು
ಉರಗನ ಮುಂಡಿಗೆನ್ಯಾರಾದರೆತ್ತಲಿ ॥ ಅಪ ॥

ವಿಶ್ವತಶ್ಚಕ್ಷು ನೀನೆ ವಿಶ್ವತೋಮುಖ ನೀನೆ
ವಿಶ್ವತೋಬಾಹು ವಿಶ್ವದುದರ ನೀನೆ
ವಿಶ್ವವ್ಯಾಪಕ ವಿಶ್ವ ಸೂತ್ರಧರ ನೀನೆ
ವಿಶ್ವನಾಟಕ ಶ್ರೀ ವಿಷ್ಣುವೇ ನಮೋ ನಮೋ ॥ 1 ॥

ಜಗಂಗಳ ಸೃಜಿಸುವ ಬೊಮ್ಮ ನಿನ್ನ ಮಗ
ಜಗಂಗಳ ಪಾವನೆ ನಿಮ್ಮ ಸುತೆ
ಜಗಂಗಳ ಜೀವನಿ ರಾಣಿ ಮಹಾಲಕ್ಷ್ಮಿ
ಜಗವ ಮೋಹಿಸುತಿರ್ಪ ಮಾಯೆ ಮನೆಯ ತೊತ್ತು ॥ 2 ॥

ಆಗಮ ನಿಗಮ ಪುರಾಣ ಶಾಸ್ತ್ರಂಗಳಲ್ಲಿ
ಯೋಗಿಗಳರಸಿ ನಿಮ್ಮ ಕಾಣದಿಪ್ಪರೊ
ನಾಗಶಯನ ಭುಜಗ ಭೂಷಣ ವಂದಿತ
ಭಾಗವತ ಪ್ರಿಯ ಪುರಂದರ ವಿಠಲ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಹರಿಯೇ ಸರ್ವೋತ್ತಮ –** ಸಕಲ ಜೀವ ಜಡ ಪ್ರಪಂಚದಲ್ಲಿ ಅವನಿಗೆ ಎಣೆಯಾದವರೂ ಇಲ್ಲ ಮಿಗಿಲಾದವರೂ ಇಲ್ಲ (ನ ತತ್ಸಮಃ ನಾಭ್ಯಧಿಕಃ).

**ಹರಿಯೇ ಪರದೇವತೆ –** ದೇವತಾ ತಾರತಮ್ಯದಲ್ಲಿ ಎಲ್ಲ ದೇವತೆಗಳೂ ಅವನಿಗೆ ಅಧೀನರೆ; ಉಳಿದೆಲ್ಲ ದೇವತೆಗಳಿಗೂ ಅವನೇ ದೇವತೆಯಾದುದರಿಂದ 'ಪರ' ದೇವತೆ.

**ಹರಿ ಸರ್ವ –** ಸರ್ವವ್ಯಾಪಿ.

**'ವಿಶ್ವಮಯಂ ಜಗತ್' –** ಇದು 'ವಿಷ್ಣುಮಯಂ ಜಗತ್' ಎಂದಿರಬೇಕು; ವಿಶ್ವವೆನ್ನುವುದು ವಿಷ್ಣುವಿನ ಹೆಸರೆಂದು ಬೇಕಿದ್ದರೆ ಸಮಾಧಾನವನ್ನು ಹೇಳಬಹುದು (ಸಹಸ್ರನಾಮ ಸ್ತೋತ್ರದಲ್ಲಿ 'ವಿಶ್ವಂ ವಿಷ್ಣುರ್ವಷಟ್ಕಾರಃ' ಎಂದಿದೆ).

**ಹರಿಯಲ್ಲದೆ ಅನ್ಯತ್ರ ದೈವಂಗಳಿಲ್ಲ –** ಎಲ್ಲ ದೈವಗಳಿಗೂ ಹರಿಯೇ ಸತ್ತಾಪ್ರದ, ಪ್ರೇರಕ, ನಿಯಾಮಕ.

**ಮುಡಿ** = ಹೆಡೆ

**ಉರಗನ ಹೆಡೆಯನ್ನು ಪಿಡಿದು ಹೇಳುವೆನು –** 'ಹಾವಿನ ಹೆಡೆಯನ್ನು ಹಿಡಿದು ಹೇಳುವೆನು' ಎಂದರೆ ಅಂಜದೆ, ಅಳುಕದೆ ಶಪಥ ಮಾಡಿ ಹೇಳುತ್ತೇನೆ. (ಹರಿಯಲ್ಲದ್ರನ್ಯತ್ರ) ದೈವಗಳುಂಟೆಂದು ಉರಗನ ಮುಂಡಿಗೆಯನ್ಯಾರಾದರೆತ್ತಲಿ' – ಇದು ಪಾಠಾಂತರ. ಈ ಬಗೆಯ ಪೈಪೋಟಿಗೂ ತಾವು ಸಿದ್ಧ ಎಂಬರ್ಥ).

**ಜಗವ ಪುಟ್ಟಿಸುವ ಬ್ರಹ್ಮ –** ದೇವತಾ ತಾರತಮ್ಯದಲ್ಲಿ ಮೂರನೆಯ ಕಕ್ಷೆಯಲ್ಲಿರುವನು. ಮಹಾ ಪ್ರಳಯವಾದ ಮೇಲೆ ಹರಿಯು ಬ್ರಹ್ಮಾಂಡ ಜಲದಲ್ಲಿ ಹದಿನಾಲ್ಕು ಕೋಟಿ ಯೋಜನ ಪ್ರಕಾಶವನ್ನು ಬೀರುವ ಹದಿನಾಲ್ಕು ದಳಗಳ ಕಮಲವನ್ನು ಕಾಣಿಸಿ ಅದರಿಂದ ಬ್ರಹ್ಮನು ಹುಟ್ಟಿಕೊಳ್ಳುವಂತೆ ಮಾಡುತ್ತಾನೆ; ಹದಿನಾಲ್ಕು ದಳಗಳಿಂದ ಹದಿನಾಲ್ಕು ಲೋಕಗಳು ಒದಗಿಬರುತ್ತವೆ. ತಾನು ಬ್ರಹ್ಮನ ಅಂತರ್ಯಾಮಿಯಾಗಿ ನಿಂತು ಜಗತ್ತಿನ ಸೃಷ್ಟಿ ವ್ಯಾಪಾರವನ್ನು ಬ್ರಹ್ಮನಿಂದ ಮಾಡಿಸುತ್ತಾನೆ.

**ಜಗವ ಸಂಹರಿಸುವ ರುದ್ರ –** ಐದನೆಯ ಕಕ್ಷೆಯಲ್ಲಿರುವ ದೇವತೆ; ಬ್ರಹ್ಮನಿಂದ ಹೊರಬಂದನಾಗಿ ವಿಷ್ಣುವಿಗೆ ಮೊಮ್ಮಗ.

**ಭಾಗೀರಥಿ –** ಗಂಗೆ, ವಿಷ್ಣು ಪಾದಗಳಿಂದ ಹೊರಹೊಮ್ಮಿದಳೆಂದು ಪುರಾಣ ಕತೆ.

**ಜಗದ ಜೀವರ ಮಾತೆ –** ಜೀವ ಜಡ ಜಗತ್ತನ್ನು ವಿಷ್ಣುವಿನ ಆದೇಶದಂತೆ, ಅವನ ಬಲದಿಂದಲೇ, ಸೃಷ್ಟಿಮಾಡುವವಳು ರಮಾದೇವಿ, ಲಕ್ಷ್ಮಿ; ಮೂಲ ಪ್ರಕೃತಿ ಮತ್ತು ಆದಿಶಕ್ತಿ, ಎರಡನೆಯ ಕಕ್ಷೆಯಲ್ಲಿರುವ ದೇವತೆ. ಪರಮಾತ್ಮನಂತೆ ನಿತ್ಯಳು, ಅಪ್ರಾಕೃತಳು. ಅವನೊಂದಿಗೆ ಅವಿನಾಭಾವ ಸಂಬಂಧದಲ್ಲಿರುವವಳು. ಹಾಗೆಂದೇ ಅವನ ಅರಸಿ (ರಾಣಿ).

**ವಿಶ್ವತೋಮುಖ ...** – ಪುರುಷ ಸೂಕ್ತ ಮತ್ತು ನಾರಾಯಣ ಸೂಕ್ತಗಳಲ್ಲಿ ಬರುವ ಒಕ್ಕಣೆ; ಋಗ್ವೇದದಲ್ಲಿ 'ವಿಶ್ವತಶ್ಚಕ್ಷುರುತ ವಿಶ್ವತೋಮುಖಃ' ಎಂಬ ಮಾತಿದೆ. ವಿಷ್ಣುವು ಎಲ್ಲೆಲ್ಲೂ ಇರುವನೆಂದೂ ಎಲ್ಲರ ಎಲ್ಲ ಅವಯವಗಳಲ್ಲೂ ಅವನೇ ಅಡಗಿದ್ದಾನೆಂದೂ, ಎಲ್ಲ ವ್ಯಾಪಾರಗಳೂ ಅವನ ಅಧೀನವಾಗಿಯೇ ಆಗಿವೆಯೆಂದೂ ತಾತ್ಪರ್ಯ.

**ಆಗಮ** – ಪಾಂಚರಾತ್ರವೇ ಮೊದಲಾದ ತಂತ್ರಶಾಸ್ತ್ರ ಗ್ರಂಥಗಳು.

**ನಿಗಮ** – ವೇದ ಮತ್ತು ಅದಕ್ಕೆ ಹೊಂದಿಕೊಂಡು ಬಂದ ಶಾಸ್ತ್ರ.

**ಪುರಾಣಗಳು** – ವೇದದ ಇಂಗಿತವನ್ನು ಸಾಮಾನ್ಯ ಜನರಿಗೆ ತಿಳಿಸಲು ಸಿದ್ಧವಾದ, ಉಪಬೃಂಹಣ ರೂಪವಾದ, ಗ್ರಂಥಗಳು; ವೇದವ್ಯಾಸರೇ ರಚಿಸಿದ್ದೆಂದು ಹದಿನೆಂಟು ಪುರಾಣಗಳ ಎಣಿಕೆಯಿದೆ.

**ಭೋಗಿ ಭೂಷಣ ವಂದಿತ** – ಹಾವನ್ನೇ ಆಭರಣವಾಗಿ ಉಳ್ಳ ಶಿವನಿಂದ ಪೂಜಿಸಲ್ಪಡುವವನು.

**Classification:** Keerthane
**Ankita:** purandara vittala
**Location:** NA
**Category:** Hari Sarvottama
**Sub-Category:** Krishna, Vishnu, deva, loka, daiva, huttu, brahma, uraga, shiva, Bhagirathi, jiva, arasi, shesha, purana, shastra, bhagavata, Priya, maya, Lakshmi, mane, yogi,
**Pravachana:** NA
**Explanation:** NA